(ಸದನವು ಮಧ್ಯಾಹ್ನ 1 ಗಂಟೆ 50 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರು ಉಪಸ್ಥಿತರಿದ್ದರು)

(ಭಾರತೀಯ ಜನತಾ ಪಕ್ಷದ ಶಾಸಕರುಗಳು ಮತ್ತು ಜೆ.ಡಿ(ಎಸ್) ಪಕ್ಷದ ಶಾಸಕರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

ಅಧ್ಯಕ್ಷರು : ಈಗ ಮಾನ್ಯ ಸಚಿವರು ಒಂದು ಹೇಳಿಕೆಯನ್ನು ಕೊಡುತ್ತಾರೆ. ದಯವಿಟ್ಟು ಅದನ್ನು ಎಲ್ಲರೂ ಕೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರೆ ನಿಮ್ಮ ಹೇಳಿಕೆಯನ್ನು ಕೊಡಿ.

ಶ್ರೀ ಈ. ತುಕಾರಾಂ : ಮಾನ್ಯ ಅಧ್ಯಕ್ಷರೆ, ಹಿಂದೆ ಬಿ.ಜೆ.ಪಿ ಸರ್ಕಾರವಿದ್ದಾಗ ಮನೆಗಳನ್ನು ನೀಡುವಲ್ಲಿ ಎಷ್ಟು ತಾರತಮ್ಯ ಮಾಡಿದ್ದರು ಎಂಬ ಬಗ್ಗೆ ಕೂಡ ತನಿಖೆಯಾಗಲಿ. ಆ ವಿಚಾರದ ಬಗ್ಗೆ ಕೂಡ ತಾವು ಚರ್ಚೆಗೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ನೀವು ಈಗ ಕುಳಿತುಕೊಳ್ಳಿ. ಮಾನ್ಯ ಸಚಿವರೆ, ನೀವು ಹೇಳಿಕೆ ಕೊಡಿ.

4. ವಸತಿ ಸಚಿವರ ಹೇಳಿಕೆ

ಶ್ರೀ ಎಂ.ಹೆಚ್. ಅಂಬರೀಶ್ (ಮಾನ್ಯ ವಸತಿ ಸಚಿವರು) : ಎಲ್ಲರಿಗೂ ಕೊಟ್ಟೇ ಕೊಡುತ್ತೇವೆ. ಯಾರು ಯಾರದ್ದು ಏನಿದೆಯೋ ಅದರ ಬಗ್ಗೆ requisition ಕಳುಹಿಸಿಕೊಡಿ. ಅದರ ಪ್ರಕಾರ ನಾನು ನೋಡಿ ನಿಮಗೆ ಹಣವನ್ನು ಒದಗಿಸಿ ನೀವು ಕೇಳುವಂಥ ಪ್ರಶ್ನೆಗಳಿಗೆ ಉತ್ತರ ಕೊಟ್ಟು ನಿಮ್ಮ ಆಸೆಗೆ ತಕ್ಕಂತೆ ನಡೆದುಕೊಳ್ಳುತ್ತೇನೆ, don't worry. ನೀವು ಹೇಳುವ ಪ್ರಕಾರ ಮಾಡಿಲ್ಲ. ಏನಾಗಿದೆ ಎಂಬುದೆಲ್ಲ ತಿಳುವಳಿಕಸ್ಥರಾದ ನಿಮಗೆಲ್ಲರಿಗೂ ಗೊತ್ತಿದೆ. ನಿಮ್ಮ ಕಾಲದಲ್ಲಿ ಏನಾಯಿತು ಎಂಬ ಹಳೆಯದನ್ನೆಲ್ಲವನ್ನೂ ಕೆದಕುವುದಕ್ಕೆ ಹೋಗಿ unnecessarily I don't want to argue, ಅದೆಲ್ಲವೂ ಈಗ ಬೇಕಾಗಿಲ್ಲ. ಅದನ್ನೆಲ್ಲವನ್ನೂ ಈಗ ಬಿಟ್ಟುಬಿಡಿ. ನಾವು ಈಗ 15 ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದೇವೆ. ಆ ಪ್ರಕಾರ 15 ಲಕ್ಷ ಮನೆಗಳನ್ನು ಕಟ್ಟುತ್ತೇವೆ. ಏನು ನನ್ನ ಒಬ್ಬನ ಕ್ಷೇತ್ರದಲ್ಲಿಯೇ 15 ಲಕ್ಷ ಮನೆಗಳನ್ನು ಕಟ್ಟುವುದಕ್ಕೆ ಆಗುತ್ತದೆಯೇ ? 224 ಕ್ಷೇತ್ರದಲ್ಲಿಯೂ ಮನೆಗಳನ್ನು ಕಟ್ಟಿಕೊಡುತ್ತೇವೆ.